ತಿಳಕೊಂಡಿದ್ದಾರೆ ಈ ನನ್ನ ಮಕ್ಕಳು. ನಮ್ಮೆದುರಿಗೇ ಬಾಯಿಗೆ ಬಂದಂತೆ ಮಾತಾಡ್ತಾ ಇದ್ದಾರಲ್ಲ... ಸ್ವಲ್ಪನಾದ್ರೂ ಸಂಸ್ಕಾರ ಇಲ್ವ... ಇವತ್ತು ಮಾಡ್ತೀನಿ ಅಂದುಕೊಂಡ.

ರಾತ್ರಿ ಊಟಕ್ಕೆ ಕುಳಿತಾಗ ಮಾತಿಲ್ಲ ಕಥೆಯಿಲ್ಲ. ತಾನೇ ಕೇಳಿದ... 'ಏನು ಪುಟ್ಟಿ ಸಂಜೆ ಅಮ್ಮನ ಜೊತೆ ತುಂಬಾ ಚೆನ್ನಾಗಿ ಮಾತಾಡ್ತ ಇದ್ದಹಾಗೆ ಇತ್ತು...' ಅವನ ಧ್ವನಿ ಕೂರಲಗಿನಂತಿತ್ತು. ಅವಳು ಸ್ವಲ್ಪ ಬೆಚ್ಚಿದಳೇನೋ 'ಸಾರಿ ಅಪ್ಪ' ಅಂದವಳೇ ತಲೆ ತಗ್ಗಿಸಿ ಊಟ ಮುಗಿಸಿ ಎದ್ದು ಹೊರಟೇ ಬಿಟ್ಟಳು. ಮಗನ ಕಡೆ ತಿರುಗಿದ ಅವನು 'ಏನಪ್ಪ ದೊರೆ... ಎಂ.ಎಸ್ಸಿ... ನಿನ್ನ ಪ್ರಾಬ್ಲಂ ಏನು?' ಧ್ವನಿಯಲ್ಲಿ ಕಿಡಿ ಇತ್ತು. 'ಅಪ್ಪಾ... ಅದು... ಸುಮ್ಮನೇ...' ತಲೆ ತಗ್ಗಿಸಿದ. 'ಊಟ ಆದಮೇಲೆ ನಾನು ಮಾತಾಡಬೇಕು. ನೀವಿಬ್ರೂ ನನ್ನ ರೂಮಿಗೆ ಬನ್ನಿ' ಅಂದು ಊಟ ಮುಗಿಸಿ ಎದ್ದುಬಿಟ್ಟ ಸುಂದರಂ. ಆದರೆ, ರೂಂಗೆ ಬಂದವಳು ಸುಮತಿ!!

**ಪಕ್ಕದ ಚೇರ್‌ನ ಸತೀಶ್ 'ನಮ್ಮ ಪಕ್ಕದ ಮನೆ ಹುಡುಗಿ ಬೇರೆ ಜಾತಿಯವನನ್ನ ಮದುವೆ ಆಗಿ ಕರಕೊಂಡು ಬಂದೇ ಬಿಟ್ಟಳು. ಅವರ ಮನೆ ಪೇಚಾಟ ಕೇಳಬಾರದು' ಅಂದಾಗ ಇವನ ಮನಸ್ಸಿನಲ್ಲಿ 'ನಮ್ಮ ಪುಟ್ಟೀನೂ ನಾಳೆ ಹೀಗೇ ಮಾಡಿಬಿಟ್ಟರೆ...' ಅನ್ನಿಸಿ ಹೊಟ್ಟೆಯಲ್ಲೆಲ್ಲ ಸಂಕಟವಾಯಿತು.**

'ನೀನು ಯಾಕೆ ಬಂದೆ? ಮಲಗು ಹೋಗು. ನಾನು ಅವರಿಬ್ಬರನ್ನೂ ಬರಲು ಹೇಳಿದ್ದೀನಲ್ಲ. ನನಗೆಲ್ಲ ತಿಳಿದಿದೆ' ಮೃದುವಾಗಿ ಹೇಳಿದ. ಇನ್ನಾದರೂ ತಾನು ಸ್ವಲ್ಪ ಜವಾಬ್ದಾರಿ ತೊಗೊಂಡು ಕೆಲಸ ಮಾಡಬೇಕು ಅಂತ ಅವನಿಗೆ ಅನಿಸಿತ್ತು.

'ಏನು ತಿಳಿದಿದೆ' ಮೆಲ್ಲಗೆ ಹೇಳಿದರೂ ಅವಳ ಧ್ವನಿಯಲ್ಲಿ ಗದರಿಕೆ ಇತ್ತು. 'ಈಗಿನ ಕಾಲದ ಹುಡುಗರು. ಏನೋ ಮಾತಾಡ್ತಾರೆ. ಅದನ್ನೆಲ್ಲ ಹಗರಣ ಮಾಡುವುದು ಬೇಡ' ಎಲೆ ಅಡಿಕೆ ಮಡಿಚಿಕೊಟ್ಟಳು.

'ಏನು ಈಗಿನ ಕಾಲದ ಹುಡುಗರು ಅಂದ್ರೆ!! ಹಾಗೇ ಭೂಮಿಯಿಂದ ಉದ್ಭವ ಆಗಿಬಿಟ್ಟರಾ ಅಥವಾ ಆಕಾಶದಿಂದ ಉದುರಿಬಿಟ್ಟರಾ. ಏನು?' ಅವನ ಧ್ವನಿ ಏರಿತ್ತು. 'ಹೊತ್ತು, ಹೆತ್ತು, ಸಾಕಿ ಸಲಹಿದ ಮೇಲೆ ತಾನೇ ಅವರಿಗೆಲ್ಲ ಮಾತು, ಭಾಷೆ, ಓದು ಎಲ್ಲ ಬಂದಿರೋದು... ಇಷ್ಟರವರೆಗೂ ನನ್ನ ಅರಿವಿಗೆ ಇದ್ಯಾವುದೂ ಬರದೇ ಇದ್ದಿದ್ದೇ ಮೊದಲ ತಪ್ಪು. ಈಗ ಇಲ್ಲಿವರೆಗೆ ಮಾತಾಡ್ತಾರೆ ಅಂದ್ರೆ... ಈಗಿನ ಕಾಲದ ಹುಡುಗರು ಅಂತ ರಾಗ ಎಳೀತೀಯ. ಏನು ನಡೀತಾ ಇದೆ ನಮ್ಮ ಮನೇಲಿ. ಸುಮ್ಮನಿರಿ ಅಂದ್ರೆ ಏನರ್ಥ' ಕೈಲಿದ್ದ ಪುಸ್ತಕವನ್ನ ಟೇಬಲ್ ಮೇಲೆ ಜೋರಾಗಿ ಎಸೆದ.

'ಶ್... ಸ್ವಲ್ಪ ಮೆತ್ತಗೆ ಮಾತಾಡಿ. ಕೋಪ ಬಂದರೆ ಅದನ್ನ ತೋರಿಸಿಕೊಳ್ಳೋ ಅಗತ್ಯ ಇಲ್ಲ. ಎಲ್ಲರ ಮನೇಲೂ ಆಗೋದೇ ನಮ್ಮ ಮನೇಲೂ ಆಗೋದು... ನಿಮಗೆ ಅದು ಬೇರೆ ತರ ಅನ್ನಿಸ್ತಿದೆಯಲ್ಲ ಅದು ಯಾಕೆ ಅಂತ ನೀವೇ ತಿಳಕೊಳ್ಳಿ. ಏನೋ ನಡೀಬಾರದ್ದು ನಡೀತಿದೆ ಅನ್ನೋತರಹ ಆಡ್ತೀರಲ್ಲ... ಈಗ ಮಲಗೋಣ. ಗುಡ್ ನೈಟ್' ಅಂದು ಸುಮತಿ ಹೊರಟುಬಿಟ್ಟಳು.